**All India Radio: Bangalore**
**National Bulletin In Kannada**
**27.09.2025 19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ ಅವರಿಂದ ೬೦ ಸಾವಿರ ಕೋಟಿ ರೂಪಾಯಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಉದ್ಘಾಟನೆ
2. ದೇಶೀಯ ತಂತ್ರಜ್ಞಾನ ನಿರ್ಮಿತ ೪-ಜಿ ; ೯೮ ಸಾವಿರ ಮೊಬೈಲ್ ಟವರ್ ಲೋಕಾರ್ಪಣೆ ; ೩೦ ಸಾವಿರ ಹಳ್ಳಿಗಳಿಗೆ ಶೀಘ್ರದಲ್ಲೇ ಹೈಸ್ಪೀಡ್ ಇಂಟರ್‌ನೆಟ್
3. ಪ್ರಧಾನಿ ನರೇಂದ್ರ ಮೋದಿ ಅವರಿಂದ ನಾಳೆ ಮನ್ ಕಿ ಬಾತ್ ಮೂಲಕ ದೇಶ-ವಿದೇಶಗಳಲ್ಲಿರುವ ಸಮುದಾಯದೊಂದಿಗೆ ಮನದಾಳದ ಮಾತು
4. ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್ ಶಿಪ್ : ಭಾರತದ ಶೀತಲ್ ದೇವಿ, ತೋಮನ್ ಕುಮಾರ್‌ಗೆ ಸ್ವರ್ಣ

<><><><>

ಪ್ರಧಾನಿ ನರೇಂದ್ರ ಮೋದಿ ಒಡಿಶಾದ ಜಾರ್ಸುಗುಡದಿಂದ ೬೦ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಇಂದು ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದರು. ದೂರಸಂಪರ್ಕ, ರೈಲ್ವೆ, ಉನ್ನತ ಶಿಕ್ಷಣ, ಆರೋಗ್ಯ ಸೇವೆ, ಕೌಶಲ್ಯಾಭಿವೃದ್ಧಿ, ಗ್ರಾಮೀಣಾ ವಸತಿ ವಲಯ ಸೇರಿದಂತೆ ವಿವಿಧ ಪ್ರಮುಖ ಯೋಜನೆಗಳು ಇದರಲ್ಲಿ ಸೇರಿವೆ. ಪ್ರಧಾನಿಯವರು ಇದೇ ನಂತರ ಒಡಿಶಾದ ಬೆಹರಾಂಪುರ್ ಹಾಗೂ ಗುಜರಾತ್‌ನ ಉಧ್ನಾ ನಡುವಿನ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿದರು. ಒಡಿಶಾ ರಾಜ್ಯಪಾಲ ಹರಿಬಾಬು, ಕಂಬಮ್‌ಪತಿ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ್, ಉಧ್ನಾ ರೈಲು ನಿಲ್ದಾಣದಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ರೈಲು ಒಡಿಶಾ, ಆಂಧ್ರಪ್ರದೇಶ, ಛತ್ತೀಸ್‌ಗಢ, ಮಹಾರಾಷ್ಟ್ರ ಮೂಲಕ ಗುಜರಾತ್ ತಲುಪಲಿದೆ. ಪ್ರಧಾನಿಮಂತ್ರಿಯವರು ಇದೇ ಸಂದರ್ಭದಲ್ಲಿ ಬಿಎಸ್‌ಎನ್‌ಎಲ್ ಅತ್ಯಾಧುನಿಕ ೪-ಜಿ ದೇಶೀಯ ತಂತ್ರಜ್ಞಾನದೊಂದಿಗೆ ಸುಮಾರು ೩೭ ಸಾವಿರ ಕೋಟಿ ರೂಪಾಯಿಯಲ್ಲಿ ನಿರ್ಮಿಸಿದ ೯೭ ಸಾವಿರದ ೫೦೦ ಮೊಬೈಲ್ ಟವರ್‌ಗಳ ಸೇವೆಗಳನ್ನು ಲೋಕಾರ್ಪಣೆ ಮಾಡಿದರು. ಬಳಿಕ ಅವರು ಮಾತನಾಡಿ, ಭಾರತ ೨-ಜಿ, ೩-ಜಿ ತಂತ್ರಜ್ಞಾನಗಳಲ್ಲಿ

ವಿದೇಶಗಳೊಂದಿಗೆ ಸ್ಪರ್ಧೆ ಎದುರಿಸಬೇಕಾಗಿತ್ತು. ಇಂದಿನ ಸಾಧನೆಯಿಂದ ಭಾರತ ಸ್ವಂತ ಟೆಲಿಕಾಂ ಜಾಲವನ್ನು ನಿರ್ಮಿಸಿ ಬೆಂಬಲಿಸುವ ಸಾಮರ್ಥ್ಯ ಹೊಂದಿರುವ ಕೆಲವೇ ದೇಶಗಳಲ್ಲಿ ಒಂದಾಗಿದೆ. ಭಾರತ ಭವಿಷ್ಯದಲ್ಲಿ ದೂರ ಸಂಪರ್ಕ, ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಕೇಂದ್ರವಾಗಲಿದೆ ಎಂದರು. ಬಿಎಸ್‌ಎನ್‌ಎಲ್ ಸಂಪೂರ್ಣ ದೇಶೀಯವಾಗಿ ೪-ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿರುವುದು ಹೆಮ್ಮೆಯ ವಿಚಾರ ಇಂದಿನ ಉಪಕ್ರಮದಿಂದ ದೇಶದ ೩೦ ಸಾವಿರ ಹಳ್ಳಿಗಳು ಶೀಘ್ರದಲ್ಲೇ ಹೈಸ್ಪೀಡ್ ಇಂಟರ್‌ನೆಟ್ ಸಂಪರ್ಕ ಪಡೆಯಲಿವೆ ಎಂದರು.

**ಧ್ವನಿ : ಪಿಎಂ (೩೦ ಸೆಕೆಂಡ್‌ಗಳು)**

<><><><>

ಬಳಿಕ ಪ್ರಧಾನಮಂತ್ರಿ ನರೇಂದ್ರ ಮೋದಿ, ಧಾರವಾಡ ಸೇರಿದಂತೆ ವಿವಿಧ ಭಾರತೀಯ ತಂತ್ರಜ್ಞಾನ ಸಂಸ್ಥೆ-ಐಐಟಿ ಮೂಲಸೌಕರ್ಯ ವಿಸ್ತರಣಾ ಕಾಮಗಾರಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ಹಂತ-ಬಿ ಯೋಜನೆಯಡಿ, ಕ್ಯಾಂಪಸ್‌ನಲ್ಲಿ ಶೈಕ್ಷಣಿಕ, ಸಂಶೋಧನಾ, ಹಾಸ್ಟೆಲ್, ನಿವಾಸ ಮತ್ತು ಸಮುದಾಯ ಮೂಲಸೌಕರ್ಯ ವಿಸ್ತಾರವಾಗಲಿವೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಘೋಷಿಸಿರುವ ಜಿಎಸ್‌ಟಿ ಉಳಿತಾಯ ಉತ್ಸವ ಇದೇ ತಿಂಗಳ ೨೨ರಂದು ಜಾರಿಗೆ ಬಂದಿದ್ದು, ಸಮಾಜದ ಎಲ್ಲ ವರ್ಗಗಳಿಗೆ ಲಾಭದಾಯಕವೆನಿಸಿದೆ. ದೇಶದ ನೇರ ತೆರಿಗೆ ವ್ಯವಸ್ಥೆಯನ್ನು ಸರಳೀಕರಿಸುವ ನಿಟ್ಟಿನಲ್ಲಿ ಮುಂದಿನ ತಲೆಮಾರಿನ ಜಿಎಸ್‌ಟಿ ಸುಧಾರಣೆ ಪ್ರಮುಖ ಹೆಜ್ಜೆ ಎನಿಸಿದೆ. ವಿವಿಧ ಸರಕು ಸೇವೆಗಳ ಮೇಲೆ ಜಿಎಸ್‌ಟಿ ತೆರಿಗೆ ಕಡಿಮೆ ಮಾಡಿರುವುದು ಜನತೆಗೆ ಗಮನಾರ್ಹ ಪರಿಹಾರ ಒದಗಿಸಿದೆ.

**ಈ ಕುರಿತಂತೆ ಒಂದು ವರದಿ : ಶಿಲ್ಪ ಹೆಚ್.ಎಂ.**

ಹೊಸ ಜಿಎಸ್‌ಟಿ ತೆರಿಗೆ ಸುಧಾರಣೆಯಡಿ ಸರ್ಕಾರ ಆರೋಗ್ಯ ಪಾಲನೆ ಮತ್ತು ಪ್ರಮುಖ ಕ್ಷೇತ್ರಗಳಲ್ಲಿನ ಬಂಡವಾಳ ಹೂಡಿಕೆ ಉತ್ತೇಜಿಸಲು ಗಣನೀಯ ತೆರಿಗೆ ಇಳಿಕೆ ಪ್ರಕಟಿಸಿದೆ. ಜಿಮ್ ಹಾಗೂ ಫಿಟ್‌ನೆಸ್ ಕೇಂದ್ರಗಳ ಮೇಲಿನ ಜಿಎಸ್‌ಟಿ ಪ್ರಮಾಣ ಶೇಕಡ ೧೮ ರಿಂದ ೫ಕ್ಕೆ ಇಳಿದಿದೆ. ಇದು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಲು ಉತ್ತೇಜನ ನೀಡುತ್ತದೆ. ಇದು ಜಿಮ್ ಸದಸ್ಯತ್ವವನ್ನು ಹೆಚ್ಚಿಸಲಿದ್ದು, ಜಿಮ್ ಮಾಲೀಕರ ಆದಾಯ ಕೂಡ ಹೆಚ್ಚಾಗಲಿದೆ. ಸ್ವಸ್ಥ ಜೀವನಶೈಲಿ ಬಗ್ಗೆ ಕಾಳಜಿ ಹೊಂದಿರುವ ಮಧ್ಯಮವರ್ಗದ ಕುಟುಂಬಗಳಿಗೆ ಕ್ಷೀರ ಆಧರಿತ ಪಾನೀಯ ಹಾಗೂ ಒಣ ಹಣ್ಣು ಮೊದಲಾದ ಆರೋಗ್ಯಕರ ಆಹಾರ ವಸ್ತುಗಳ ಮೇಲೆ ಶೇಕಡ ೫ರ

ತೆರಿಗೆ ಮುಂದುವರಿಯುತ್ತಿದೆ. ಸರ್ಕಾರ ಜಿಎಸ್‌ಟಿ ದರ ಇಳಿಸಿರುವ ಬಗ್ಗೆ ಆಕಾಂಕ್ಷಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಧ್ವನಿ : ಆಕಾಂಕ್ಷಾ (೧ ನಿಮಿಷ ೩೦ ಸೆಕೆಂಡ್‌ಗಳು)**

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ತಿಂಗಳ ೨೧ರಂದು ದೇಶದ ಜನತೆಯನ್ನುದ್ದೇಶಿಸಿ ಮಾತನಾಡಿ, ಜಿಎಸ್‌ಟಿ ಉಳಿತಾಯ ಉತ್ಸವದಲ್ಲಿ ನಾಗರಿಕರು ದೇಶೀಯ ಉತ್ಪನ್ನಗಳನ್ನು ಖರೀದಿಸಿ ಸ್ಥಳೀಯ ಉದ್ದಿಮೆಗಳಿಗೆ ಬೆಂಬಲ ನೀಡಬೇಕೆಂದು ಕರೆ ನೀಡಿದ್ದರು.

<><><><>

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೬ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

<><><><>

ಸೇವೆ ಮತ್ತು ಸುಶಾಸನ, ಅಂದರೆ ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಮಂತ್ರವನ್ನು ಅಳವಡಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಆಕಾಶವಾಣಿ ನ್ಯೂಸ್ ನಮ್ಮ ಕೇಳುಗರಿಗೆ ವಿಶೇಷ ಸರಣಿ - "ಸೇವಾ ಪರ್ವ್" ಅನ್ನು ತರುತ್ತದೆ. ಇಂದಿನ ಸಂಚಿಕೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ವಿವಿಧತೆಯಲ್ಲಿ ಏಕತೆ, ಸಂಸ್ಕೃತಿ ಪರಂಪರೆ ಮತ್ತು ಜನರ ನಡುವಿನ ಸಂಬಂಧಗಳನ್ನು 'ಒಂದೇ ಭಾರತ ಶ್ರೇಷ್ಠ ಭಾರತ' ಉಪಕ್ರಮದ ಮೂಲಕ ಹೇಗೆ ಬಲಗೊಳಿಸಿದೆ ಎಂಬುದರ ಕುರಿತಾಗಿದೆ. ನಮ್ಮ ದೇಶ ನೂರಾರು ಭಾಷೆ, ಉಪಭಾಷೆಗಳಿಗೆ ತವರಾಗಿದೆ. ಪ್ರತಿ ಪ್ರದೇಶ ತನ್ನದೇ ಆದ ವಿಶಿಷ್ಟ ಆಹಾರ ಹಾಗೂ ಉಡುಗೆ, ತೊಡುಗೆ ಸಂಪ್ರದಾಯಗಳನ್ನು ಹೊಂದಿದ್ದರೂ ನಮ್ಮೆಲ್ಲರ ನಡುವೆ ಪರಸ್ಪರ ಅನುಬಂಧವಿದೆ. ಈ ಸ್ಫೂರ್ತಿಯನ್ನು ಬಲಗೊಳಿಸಲು ಪ್ರಧಾನಿ ನರೇಂದ್ರ ಮೋದಿ, ೨೦೧೫ರಲ್ಲಿ ಒಂದೇ ಭಾರತ ಶ್ರೇಷ್ಠ ಭಾರತ ಎನ್ನುವ ಶಕ್ತಿಯುತ ಸಂದೇಶವನ್ನು ಹಂಚಿಕೊಂಡಿದ್ದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ಸೆಕೆಂಡ್‌ಗಳು)**

ದೇಶದ ಪ್ರತಿ ಉತ್ಪನ್ನ ಆಯಾ ನೆಲದ ಸೊಗಡನ್ನು ಸಾರುತ್ತದೆ ಹಾಗೂ ರಾಜ್ಯ, ರಾಜ್ಯಗಳ ನಡುವಿನ ಸಂಬಂಧಗಳನ್ನು ಬೆಸೆಯುತ್ತವೆ. ಪರಸ್ಪರರ ಬಾಂಧವ್ಯವನ್ನು ಬಲಗೊಳಿಸುತ್ತದೆ.

<><><><>

ವಿಶ್ವ ಪ್ರವಾಸೋದ್ಯಮ ದಿನದ ಸಂದರ್ಭದಲ್ಲಿಂದು ಪ್ರವಾಸೋದ್ಯಮ ಸಚಿವಾಲಯ ವಿವಿಧ ಪ್ರವಾಸೋದ್ಯಮ ಯೋಜನೆಗಳು ನಿರ್ವಹಿಸಲು ಯೋಜನಾ ನಿರ್ವಹಣೆ ಮಾಹಿತಿ ವ್ಯವಸ್ಥೆಯನ್ನು ಆರಂಭಿಸಿದೆ. ಈ ಡಿಜಿಟಲ್ ವೇದಿಕೆ ಯೋಜನೆಗಳ ನೈಜಕಾಲ ನಿರ್ವಹಣೆ ಪಾರದರ್ಶಕತೆ ಮತ್ತು ದಕ್ಷತೆಯನ್ನು ಖಾತರಿಪಡಿಸಲಿದೆ. ನವದೆಹಲಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಸುರೇಶ್ ಗೋಪಿ ಮಾತನಾಡಿ, ಸರ್ಕಾರ ಕೈಗೊಂಡಿರುವ ಸ್ವದೇಶ್ ದರ್ಶನ್-೨೦ ಹಾಗೂ ಪ್ರಶಾದ್ ಯೋಜನೆಗಳು ಪ್ರವಾಸಿಗರನ್ನು ಹಾಗೂ ಯಾತ್ರಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳಲಾದ ಕಾರ್ಯಕ್ರಮಗಳಾಗಿವೆ ಎಂದರು.

<><><><>

ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್ ಶಿಪ್‌ನಲ್ಲಿ ಭಾರತ ವೈಯಕ್ತಿಕ ಸಂಯುಕ್ತ ವಿಭಾಗದಲ್ಲಿ ಇಂದು ಎರಡು ಚಿನ್ನದ ಪದಕಗಳನ್ನು ಪಡೆಯುವುದರೊಂದಿಗೆ ಒಟ್ಟು ೭ ಪದಕಗಳನ್ನು ಗಳಿಸಿವೆ. ದಕ್ಷಿಣ ಕೊರಿಯಾದ ಗ್ವಾಂಜುನಲ್ಲಿ ನಡೆದ ಅಂತಿಮ ದಿನದ ಪಂದ್ಯದಲ್ಲಿ ಭಾರತದ ೧೮ ವರ್ಷದ ಶೀತಲ್ ದೇವಿ ಸಂಯುಕ್ತ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದರು. ಪುರುಷರ ಇದೇ ವಿಭಾಗದಲ್ಲಿ ತೋಮನ್ ಕುಮಾರ್ ಸ್ವರ್ಣ ಪದಕ ಪಡೆದರು. ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್ ಶಿಪ್‌ನಲ್ಲಿ ಭಾರತ ೩ ಚಿನ್ನ, ೧ ರಜತ ಹಾಗೂ ೩ ಕಂಚಿನ ಪದಕಗಳನ್ನು ಗಳಿಸಿದಂತಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>